ದಾಸ್. ಒಡಿಸ್ಸಿ ನೃತ್ಯಲೋಕದಲ್ಲಿ ಕೇಳುಚರಣ್ ಮೊಹಪಾತ್ರ ಅವರ ಶೈಲಿಯೇ ಇಂದು ಪ್ರಧಾನವಾಗಿ ಗುರುತಿಸಿಕೊಂಡಿದ್ದರೂ, ಬಹುಅಮೂಲ್ಯವಾದ ದೇಬಪ್ರಸಾದ್ ದಾಸ್ ಪರಂಪರೆಯನ್ನು ಮುನ್ನಡೆಸುತ್ತಿರುವವರು ಕಲಾವಿದ ರಾಮ್ಲಿ ಇಬ್ರಾಹಿಂ. ಅವರು 1983ರಲ್ಲಿ ಕೌಲಾಲಂಪುರದಲ್ಲಿ 'ಸೂತ್ರ ಡಾನ್ಸ್ ಥಿಯೇಟರ್' ಸ್ಥಾಪಿಸಿದರು. ಈ ಥಿಯೇಟರ್ ಮೂಲಕ ಜಗತ್ತಿನಾದ್ಯಂತ ಒಡಿಸ್ಸಿ ನೃತ್ಯದ ಮಹತ್ವ ಪ್ರಸಾರವಾಗಲು ಕಾರಣರಾದರು. ಅವರ ಈ ಪರಿಶ್ರಮಕ್ಕಾಗಿ ಭಾರತ ಸರ್ಕಾರವು ಪದ್ಮಶ್ರೀ ಪುರಸ್ಕಾರ ನೀಡಿದೆ. ಮಲೇಷ್ಯಾ ಸರ್ಕಾರ ಅವರಿಗೆ 'ದಾತುಕ್' ಎಂಬ ಬಿರುದು ನೀಡಿ ಗೌರವಿಸಿದೆ. ಅವರೊಡನೆ ಮಯೂರ ನಡೆಸಿದ ಮಾತುಕತೆಯ ಮುಖ್ಯಾಂಶಗಳು ಇಲ್ಲಿವೆ.

◆ **ನಿಮ್ಮ ಕಣ್ಣುಗಳಲ್ಲಿ ಸಂತೃಪ್ತ ಭಾವ ಕಾಣಿಸುತ್ತದೆ. ಅದು ಹೇಗೆ?**

ಹೌದೇ... ಹಾಗೆ ಕಾಣಿಸುತ್ತದೆಯೇ? ಆದರೆ, ಕಲಾವಿದನಾಗಿ ನಾನು ಆತ್ಮಸಂತೃಪ್ತಿಯಿಂದ ದೂರವಿರಬೇಕು ಎಂದು ಬಯಸುತ್ತೇನೆ. ಒಮ್ಮೆ ಸಂತೃಪ್ತಿ ಎಂಬುದು ನಮ್ಮ ಮನದೊಳಗೆ ನುಸುಳಿಬಿಟ್ಟರೆ ಮತ್ತೆ ಸಾಧಿಸಬೇಕೆಂಬ ಅಗ್ನಿಯು ಅಂತರಂಗದಲ್ಲಿ ಉರಿಯುವುದಿಲ್ಲ ಎಂಬುದು ನನ್ನ ಗ್ರಹಿಕೆ. ಇನ್ನೂ ಎಷ್ಟೊಂದು ಕೆಲಸಗಳನ್ನು ಮಾಡಿ ಮುಗಿಸಬೇಕಿದೆ ಎಂದು ನಾನು ಆಗಾಗ ಚಿಂತಿತನಾಗುತ್ತೇನೆ. ಇತ್ತೀಚೆಗಷ್ಟೇ ಎಪ್ಪತ್ತನೇ ವರ್ಷದ ಹುಟ್ಟುಹಬ್ಬವನ್ನು ಆಚರಿಸಿಕೊಂಡಿರುವ ನನಗೆ ಉಳಿದಿರುವ ಸಮಯವೂ ಬಹಳವೇ ಕಡಿಮೆ ಎಂದು ಆತಂಕವಾಗುತ್ತಿದೆ.

ನನ್ನ ಗಮ್ಯವನ್ನು ತಲುಪುವ ನಿರಂತರ ಪ್ರಕ್ರಿಯೆಯೇ ನನ್ನ ಪರಿಶ್ರಮದ ಹಾದಿಯಾಗಿದೆ. ಹೀಗೆ ಸಾಗುತ್ತ ನಾನು ನನ್ನ ಜೀವನದ ನಿಜವಾದ ಸತ್ಯವನ್ನು ಕಂಡುಕೊಳ್ಳಲು ಯತ್ನಿಸುತ್ತೇನೆ. ಅಂದರೆ ನನ್ನೊಳಗೆ ಅಂತರ್ಗತವಾಗಿರುವ ಸಾಮರ್ಥ್ಯ ಮತ್ತು ಪ್ರತಿಭೆಯನ್ನು ಗುರುತಿಸಿಕೊಂಡು, ಆನಂತರದಲ್ಲಿ ನಾನು ಜೀವನದಲ್ಲಿ ಏನನ್ನು ಸಾಧಿಸಬೇಕೆಂದು ನಿಶ್ಚಯ ಮಾಡಿಕೊಂಡಿದ್ದೇನೋ, ಅದರತ್ತ ಹೆಜ್ಜೆಯಿಡುತ್ತೇನೆ. ಅದೇ ವೇಳೆಗೆ ನಾನು ಸಾಗುವ ದಾರಿಯು ನನ್ನ ಸಮುದಾಯಕ್ಕೆ ಸಹಕಾರಿಯಾಗಲಿ ಎಂಬ ಧೋರಣೆಯೂ ಸೇರಿಕೊಂಡಿದೆ. ಅಂತರಂಗದಲ್ಲಿ ಹುಡುಕಾಟದ ಪಯಣ, ಅದರ ನೆರವಿನಿಂದ ಸಾಧನೆಯತ್ತ ಗಮನ ಹಾಗೂ ಇವುಗಳ ಮೂಲಕ ಮನುಷ್ಯನ ಅಸ್ತಿತ್ವದ ಕಾರಣವನ್ನು ಹುಡುಕುವುದು. ಗಮ್ಯವನ್ನು ವ್ಯಾಖ್ಯಾನಿಸಲು ಇಷ್ಟು ಸಾಕಲ್ಲವೇ.

◆ **ಒಡಿಸ್ಸಿ ಎಂಬ ಬೃಹತ್ ಕಲಾಲೋಕವನ್ನು ಹೇಗೆ ಪರಿಚಯಿಸಿಕೊಂಡಿರಿ. ಹಿಂದಣ ಹಾದಿಯ ಬಗ್ಗೆ ಹೇಳುವಿರಾ?**

ನನ್ನ ಮನೋಧರ್ಮವೇ ಕಲಾತ್ಮಕತೆಯನ್ನು ಪ್ರೀತಿಸುವ ಪ್ರವೃತ್ತಿಯದ್ದು ಎಂಬುದನ್ನು ನಾನು ಬಹಳ ಸಣ್ಣ ವಯಸ್ಸಿನಲ್ಲಿಯೇ ಗುರುತಿಸಿಕೊಂಡಿದ್ದೆ. ಹಾಗಾಗಿ ಹಾಡು-ನೃತ್ಯಗಳತ್ತ ಒಲವಿತ್ತು. ನಾನು ಹುಟ್ಟಿದ್ದು ಮಲೇಷ್ಯಾದಲ್ಲಿ. ಮಲಯ್ ಸಾಂಪ್ರದಾಯಿಕ ನೃತ್ಯವನ್ನು, ಬ್ಯಾಲೆಯನ್ನು ಮೊದಲು ಕಲಿತೆ. ಆಸ್ಟ್ರೇಲಿಯಾದಲ್ಲಿರುವಾಗ ಭರತನಾಟ್ಯದ ಬಗ್ಗೆ ಒಲವು ಮೂಡಿದ್ದರಿಂದ, ಇನ್ನಷ್ಟು ಕಲಿಯಬೇಕೆಂಬ ಆಸೆಯಿಂದ ಆಗಿನ ಮದ್ರಾಸ್‌ಗೆ ಬಂದೆ. ಅಲ್ಲಿ ಅಡೆಯಾರ್ ಲಕ್ಷ್ಮಣ್ ಅವರ ಬಳಿ ಭರತನಾಟ್ಯ ಕಲಿತೆ. ಭಾರತದ ಕಲಾಪ್ರಪಂಚದ ಗಾಢವಾದ ಪ್ರಭಾವ ಇದ್ದುದರಿಂದ ಭರತನಾಟ್ಯವನ್ನು ಕಲಿಯುವುದು ಸಾಧ್ಯವಾಯಿತು. ಆದರೆ, ಯಾವಾಗ ಒಡಿಸ್ಸಿ ನೃತ್ಯದ ಸಂಗೀತವು ನನ್ನ ಕಿವಿಗಳಿಗೆ ಬಿತ್ತೋ, ತಕ್ಷಣವೇ ಅದು ನನ್ನ ಹೃದಯದಲ್ಲಿ ಅನುರಣಗೊಳ್ಳಲಾರಂಭಿಸಿತು. ನನ್ನ ಅಸ್ತಿತ್ವದ ಮೂಲದಲ್ಲಿಯೇ ಈ ನೃತ್ಯವು ಅದಾಗಲೇ ಛಾಪೊತ್ತಿ ಕುಳಿತಿದೆ ಎಂದು ಅನ್ನಿಸಲಾರಂಭಿಸಿತು. ಹೀಗೆ ನಾನು ನನ್ನ ಬದುಕನ್ನು ಒಡಿಸ್ಸಿ ಕಲಾಪ್ರಕಾರಕ್ಕೆ ಬಹಳ ತೀವ್ರತೆಯೊಂದಿಗೆ ಅರ್ಪಿಸಿಕೊಂಡೆ.

◆ **ಪರಂಪರೆಯನ್ನು ಪ್ರೀತಿಸುವವರು ನೀವು. ಈಗಲೂ ನೀವು ಅನುಸರಿಸುವ ವಸ್ತ್ರ ವಿನ್ಯಾಸವು ಸಾಂಪ್ರದಾಯಿಕ ಒಡಿಸ್ಸಿ ನೃತ್ಯ ಪ್ರಕಾರದ್ದಾಗಿದೆ. ಅದೇವೇಳೆಗೆ ಆಧುನಿಕತೆಯ ಅಂಶಗಳನ್ನು ಗ್ರಹಿಸುವ ಆಸಕ್ತಿಯನ್ನೂ ತೋರುತ್ತೀರಿ. ಈ ಪ್ರಕ್ರಿಯೆಯನ್ನು ಅರ್ಥ ಮಾಡಿಕೊಳ್ಳುವುದು ಹೇಗೆ?**